3) ಐ.ಟಿ.ಐ/ಡಿಪ್ಲೋಮಾ ಓದುತ್ತಿರುವವರಿಗೆ ರೂ.2,000/–
4) ಪದವಿ ಓದುತ್ತಿರುವವರಿಗೆ ರೂ.1,500/–
5) ವೃತ್ತಿಪರ ಶಿಕ್ಷಣ ಓದುತ್ತಿರುವವರಿಗೆ ರೂ.5,000/–

ಆ) ಬಡ ಕಾರ್ಮಿಕ ಕುಟುಂಬಗಳ ಮಕ್ಕಳಿಗೆ ಶೈಕ್ಷಣಿಕ ಮೀಸಲಾತಿ, ಪ್ರೋತ್ಸಾಹ ಧನ (ಸ್ಕಾಲರ್‌ಶಿಪ್) ನೀಡಿಕೆ, ಕುಶಲ ವೃತ್ತಿ ಶಿಕ್ಷಣ ಮುಂತಾದ ಸೌಲಭ್ಯಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಪ್ರೋತ್ಸಾಹ ಧನ (ಸ್ಕಾಲರ್ ಶಿಪ್) ನೀಡಿಕೆ – ಬಗ್ಗೆ 'ಅ' ಪ್ರಶ್ನೆಯಲ್ಲಿ ಉತ್ತರಿಸಲಾಗಿದೆ.

ಬಡ ಕಾರ್ಮಿಕ ಕುಟುಂಬದ ಮಕ್ಕಳಿಗೆ ಶೈಕ್ಷಣಿಕ ಮೀಸಲಾತಿ ಮತ್ತು ಕುಶಲ ವೃತ್ತಿ ಶಿಕ್ಷಣ ಮುಂತಾದ ಸೌಲಭ್ಯ ನೀಡಲು ಸರ್ಕಾರ ಕ್ರಮ ಕೈಗೊಂಡಿರುವುದಿಲ್ಲ

ಇ) ಹಾಗಿದ್ದಲ್ಲಿ, ವಿವರ ನೀಡುವುದು.

ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಈ ಕೆಳಗಿನಂತೆ ಶೈಕ್ಷಣಿಕ ಧನಸಹಾಯವನ್ನು ನೀಡಲಾಗಿದೆ.

1) 2008–09ನೇ ಸಾಲಿನಲ್ಲಿ ನೋಂದಾಯಿತ ಕಾರ್ಮಿಕರ 32 ಮಕ್ಕಳಿಗೆ ರೂ.61,250/– ಧನಸಹಾಯ ನೀಡಲಾಗಿದೆ.
2) 2009–10ನೇ ಸಾಲಿನಲ್ಲಿ ಇದುವರೆಗೆ ನೋಂದಾಯಿತ ಕಾರ್ಮಿಕರ 13 ಮಕ್ಕಳಿಗೆ ರೂ.28,500/– ಧನಸಹಾಯ ನೀಡಲಾಗಿದೆ.

ಅಲ್ಲದೆ ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ 2007–08 ಹಾಗೂ 2008–09ನೇ ಸಾಲಿನಲ್ಲಿ ಒಟ್ಟು 1496 ಮಂದಿಗೆ ರೂ.1,261,100.00ಗಳನ್ನು ಹಾಗೂ 2008–09ನೇ ಸಾಲಿನಲ್ಲಿ 4192 ಮಂದಿಗೆ ರೂ.31,96,200.00ಗಳ ವಿದ್ಯಾರ್ಥಿವೇತನವನ್ನು ನೀಡಲಾಗಿದೆ

ಹಜ್ ಯಾತ್ರಿಕರಿಗೆ ಸೌಲಭ್ಯ ನೀಡುವ ಕುರಿತು

134 ಶ್ರೀ ಹ್ಯಾರಿಸ್ ಎನ್. ಎ (ಶಾಂತಿನಗರ) ಎಂ.ಎಲ್.ಎ

ಪ್ರೊ.ಡಾ.ಮುಮ್ತಾಜ್ ಅಲಿ ಖಾನ್, (ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.)

ಅ) ರಾಜ್ಯದಲ್ಲಿ ಹಜ್ ಯಾತ್ರಿಕರಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳಾವುವು? 2007–08 ಹಾಗೂ 2008–09ನೇ ಸಾಲಿನಲ್ಲಿ ಎಷ್ಟು ಯಾತ್ರಿಕರಿಗೆ ಯಾತ್ರಾ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ.

ಕರ್ನಾಟಕ ರಾಜ್ಯ ಹಜ್ ಸಮಿತಿಯು ಅರ್ಜಿದಾರರಿಗೆ ಅರ್ಜಿಗಳನ್ನು ವಿತರಿಸಿ, ಖುರ್ರಾ (ಲಾಟರಿ)ದಲ್ಲಿ ಆಯ್ಕೆಯಾದ ಅರ್ಜಿದಾರರಿಂದ ಪೂರ್ಣಗೊಳಿಸಿದ ಅರ್ಜಿಗಳನ್ನು ಸ್ವೀಕರಿಸಿ, ಅಂತಹ ಅರ್ಜಿಗಳನ್ನು ಮುಂಬೈನ ಕೇಂದ್ರ ಹಜ್ ಸಮಿತಿಗೆ ಮುಂದಿನ ಕ್ರಮ ತೆಗೆದುಕೊಳ್ಳಲು ರವಾನಿಸಲಾಗುತ್ತದೆ.

ರಾಜ್ಯ ಹಜ್ ಸಮಿತಿ ಪ್ರತಿ ವರ್ಷ ಹಜ್ ಯಾತ್ರಿಗಳ ಸೌಕರ್ಯಕ್ಕಾಗಿ ಹಜ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತದೆ, ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಕಾರದಿಂದ ಜಿಲ್ಲಾವಾರು ಚುಚ್ಚುಮದ್ದು ಕಾರ್ಯಕ್ರಮವನ್ನು ಆಯೋಜಿಸುತ್ತದೆ.

ಹಜ್ ಯಾತ್ರಿಗಳ ಸುಗಮ ಹಾಗೂ ಸುಖಕರ ಪ್ರಯಾಣಕ್ಕಾಗಿ ಪ್ರತಿ ವರ್ಷ ಹಜ್ ಕ್ಯಾಂಪನ್ನು ಆಯೋಜಿಸುತ್ತದೆ. ಈ ಕ್ಯಾಂಪಿನಲ್ಲಿ ಹಜ್ ಯಾತ್ರಿಗಳಿಗಾಗಿ ಉಳಿದುಕೊಳ್ಳಲು, ಇವರ ಊಟ ಮತ್ತು ವಸತಿ ಸೌಕರ್ಯ ವ್ಯವಸ್ಥೆಯನ್ನು, ಕಾಗದ ಪತ್ರಗಳ ಹಂಚಿಕೆ, ಯಾತ್ರಿಗಳನ್ನು ವಿಮಾನ ನಿಲ್ದಾಣಕ್ಕೆ ತಲುಪಿಸುವ, ಇಮ್ಮಿಗ್ರೇಷನ್ ವ್ಯವಸ್ಥೆ. ಹಾಗೂ ಇನ್ನಿತರೆ ವ್ಯವಸ್ಥೆಗಳನ್ನು ಹಜ್ ಕ್ಯಾಂಪ್‌ನಲ್ಲಿಯೇ ಕಲ್ಪಿಸಲಾಗುತ್ತದೆ

ರಾಜ್ಯ ಸರ್ಕಾರವು ಹಜ್ ಕ್ಯಾಂಪ್ ಆಯೋಜಿಸಲು ಸಹಾಯಧನವನ್ನು ನೀಡುತ್ತದೆ.

ವರ್ಷ	ಹಜ್ ಕ್ಯಾಂಪ್‌ಗಾಗಿ ಸರ್ಕಾರದಿಂದ ಕಳೆದ ಮೂರು ವರ್ಷಗಳಿಂದ ನೀಡಿರುವ ಸಹಾಯಧನ
2006–07	ರೂ. 25.00 ಲಕ್ಷ
2007–08	ರೂ. 20.00 ಲಕ್ಷ
2008–09	ರೂ. 45.00 ಲಕ್ಷ

2007–08ನೇ ಸಾಲಿನಲ್ಲಿ 6788 ಯಾತ್ರಿಗಳು ಹಾಗೂ 2008–09ನೇ ಸಾಲಿನಲಿಲ್ಲ 6653 ಯಾತ್ರಿಗಳಿಗೆ ಸೌಲಭ್ಯ ನೀಡಲಾಗಿದೆ.

ಆ) ಯಾತ್ರಿಕರ ಸಂಖ್ಯೆಯಲ್ಲಿನ ಹೆಚ್ಚಳ ಮತ್ತು ಸೂಕ್ತ ಸೌಲಭ್ಯಗಳ ವಿಸ್ತರಣೆಗೆ ಸರ್ಕಾರ ಕೈಗೊಂಡಿರುವ ಯೋಜನೆಗಳಾವುವು?

ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ, ಹಾಗೂ ಯಾತ್ರಿಕರ ಅಪೇಕ್ಷೆಗೆ ಅನುಗುಣವಾಗಿ ಮೇಲ್ಕಂಡಂತೆ ಉತ್ತಮ ಗುಣಮಟ್ಟದ ಸೌಲಭ್ಯಗಳನ್ನು ಒದಗಿಸಲಾಗಿದೆ.

ಅಸಂಕಇ 255 ಡಬ್ಲ್ಯುಇಎಸ್ 2009